






# ಮ್ಯಾಂಡರಿನ್ ಬ್ಲೌಸ್

**ನೀವು ಈ ರೀತಿಯ ಇಂಸ್ತಾ ಗ್ರಾಮ್ ಗೆ ಹಾಕಲು, ಸಮಾರಂಭಕ್ಕೆ ಹಾಕಿಕೊಳ್ಳಲು ಈ ರೀತಿಯ ಬ್ಲೌಸನ್ನು ಬಯಸುತ್ತಿರುವಿರಾದರೆ ಈ ವೀಡಿಯೋ ನಿಮಗಾಗಿ.**

## ಬೇಕಾಗಿರುವ ವಸ್ತುಗಳು

45 ಇಂಚು ಅಗಲವಿರುವ 1 ಮೀಟರ್ ಸೀಕ್ವಿನ್ ಬಟ್ಟೆ
45 ಇಂಚು ಅಗಲವಿರುವ 1 ಮೀಟರ್ ಲೈನಿಂಗ್ ಬಟ್ಟೆ
ಕಾಲು ಮೀಟರ್ ದಪ್ಪವಾಗಿರುವ ಇಂಟರ್ ಲೈನಿಂಗ್ ಫ್ಯೂಸಿಂಗ್
WWW. usha Sewa .com ನಿಂದ ಡೌನ್ ಲೋಡ್ ಮಾಡಿಕೊಂಡಿರುವ ಮ್ಯಾಂಡರಿನ್ ಬ್ಲೌಸ್ ನ ಟೆಂಪ್ಲೇಟ್
14 ಇಂಚಿನ ಓಪನ್ ಮಾಡಬಹುದಾದ ಮೆಟಾಲಿಕ್ ಜಿಪ್ಪರ್
2 ಹುಕ್ ಮತ್ತು ಕಣ್ಣಿನ ಜೊತೆ
ಬೀಡೆಡ್ ಪಿನ್ಸ್
ಚಾಲ್ಕ್
ಮೆಶರಿಂಗ್ ಟೇಪ್
ಸ್ಕೇಲ್
ಉಷಾ ಜನೋಮ್ ಜಿಪ್ಪರ್ ಫುಟ್ .
ಹ್ಯಾಂಡ್ ನೀಡಲ್
ಕತ್ತರಿ
ಮತ್ತು ಮ್ಯಾಚಿಂಗ್ ದಾರ

ಈ ವೀಡಿಯೋದಲ್ಲಿ ನೀವು ಮ್ಯಾಂಡ್ರಿನ್ ಕಾಲರ್ ಬ್ಲೌಸ್ ಗೆ ಬೇಕಾಗಿರುವ ಪೀಸ್ಸನ್ನು ಟೆಂಪ್ಲೇಟ್ ಸಹಾಯದಿಂದ ಕಟ್ ಮಾಡುವುದು, ಲೈನಿಂಗ್ ಬಟ್ಟೆ ಮತ್ತು ಮುಖ್ಯವಾದ ಬಟ್ಟೆಯನ್ನು ಸೇರಿಸಿ ಹೊಲೆಯುವುದು, ಬಯೊಸ್ ಸ್ಟ್ರಿಪನ್ನು ಹೆಮ್ಮಿಂಗ್ ಮಾಡುವುದು, ಜಿಪ್ಪರನ್ನು ಸೇರಿಸುವುದು ಮತ್ತು ಕೊನೆಯಲ್ಲಿ ಕಾಲರನ್ನು ಹೈಲೈಟ್ ಮಾಡುವುದು.

## ಹಂತ 0: ಟೆಂಪ್ಲೇಟಿನಂತೆ ಮಾರ್ಕ್ ಮಾಡಿ ಕಟ್ ಮಾಡುವುದು

ನಾವು ಸೀಕ್ವಿನ್ ಬಟ್ಟೆಯಿಂದ ಪ್ರಾರಂಭಿಸೋಣ. ಬಟ್ಟೆಯನ್ನು ಬಿಡಿಸಿ ಉದ್ದವಾಗಿ ಮಡಚಿ ಮೇಜಿನ ಮೇಲಿಡಬೇಕು. www.ushasew.com ನಿಂದ ಡೌನ್ ಲೋಡ್ ಮಾಡಿಕೊಂಡಿರುವ ಮ್ಯಾಂಡರಿನ್ ಬ್ಲೌಸ್ ನ ಟೆಂಪ್ಲೇಟಿನ ಮುಂಭಾಗವನ್ನು ಬಟ್ಟೆಯ ಮಡಚಿರುವ ಭಾಗದ ಮೇಲೆ ವೀಡಿಯೋದಲ್ಲಿ ತೋರಿಸುವಂತೆ ಇಡಬೇಕು. ನಂತರ ಹಿಂಬದಿಯ ಟೆಂಪ್ಲೇಟನ್ನು ಇಡಬೇಕು. ನಿಮಗೆ ಕಾಣುವಂತೆ ಹಿಂಬಾಗದ ಬಟ್ಟೆಯನ್ನು ಮಡಚಿರುವ ಭಾಗದ ಮೇಲೆ ಇಟ್ಟಿರುವುದಿಲ್ಲಾ ಏಕೆಂದರೆ ಹಿಂಭಾಗಕ್ಕೆ ಎರಡು ಬೇರೆ ಬೇರೆ ಪೀಸ್ ಗಳು ಬೇಕು. ಮಿಕ್ಕಿರುವ ಬಟ್ಟೆಯನ್ನು ಕಾಲರ್ ಟೆಂಪ್ಲೇಟಿಗೆ ಹೊಂದಿಸಬೇಕು. ಕಾಲರ್ ಟೆಂಪ್ಲೇಟನ್ನು ಸೀಮ್ ಅಲೋಯೆನ್ ಮೇಲೆ ಇಟ್ಟಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ ಇನ್ನೊಂದು ಟೆಂಪ್ಲೇಟನ್ನು ಫ್ಯೂಸಿಂಗ್ ಗೆ ಬಳಸಬೇಕು. ಬೀಡೆಡ್ ಪಿನ್ ಸಹಾಯದಿಂದ ಇದನ್ನು ಪಿನ್ ಮಾಡಿ. ಚಾಲ್ಕನ್ನು ಬಳಸಿ ಬಟ್ಟೆಯ ಮೇಲೆ ನಿಧಾನವಾಗಿ ಮಾರ್ಕ್ ಮಾಡಿ. ಇದಾದ ನಂತರ ಟೆಂಪ್ಲೇಟಿನಿಂದ ಪಿನ್ ಗಳನ್ನು ತೆಗೆಯಿರಿ. ಟೆಂಪ್ಲೇಟನ್ನು ತೆಗೆಯಿರಿ ಮತ್ತು ಬಟ್ಟೆಯನ್ನು ಮತ್ತೆ ಪಿನ್ ಮಾಡಿ ಇದು ಬಟ್ಟೆ ಜಾಗದಲ್ಲಿರುವಂತೆ ಸಹಾಯವಾಗುತ್ತದೆ.





ಕತ್ತರಿಯನ್ನು ಬಳಸಿ ಬಟ್ಟೆಯ ಪೀಸನ್ನು ಕತ್ತರಿಸಬೇಕು. ಮುಂಭಾಗದಿಂದ ಪ್ರಾರಂಭಿಸಿ ಕಾಲರ್ ಮತ್ತು ಅಂತ್ಯದವರೆಗೂ ಕತ್ತರಿಸಿ. ಇದೇ ರೀತಿ ಟೆಂಪ್ಲೇಟನ್ನು ಬಳಸಿ. ಸ್ಯಾಟಿನ್ ಲೈನಿಂಗ್ ಬಟ್ಟೆ ಪೀಸನ್ನು ವೀಡಿಯೋದಲ್ಲಿ ತೋರಿಸಿರುವಂತೆ ಕತ್ತರಿಸಬೇಕು. ನಮಗೆ ಸ್ಯಾಟಿನ್ ಲೈನಿಂಗ್ ಬಟ್ಟೆಯ 2 ಪೀಸ್ ಗಳು ಕಾಲರ್ ಗೆ ಬೇಕಾಗುತ್ತದೆ.






ಎಲ್ಲಾ ಪೀಸಸ್ ಆದ ನಂತರ ಫ್ಯೂಸಿಂಗನ್ನು ತೆಗೆಯಿರಿ. ಫ್ಯೂಸಿಂಗ್ ಬಟ್ಟೆಗೆ ಹೆಚ್ಚಾದ ಭದ್ರತೆಯನ್ನು ಒದಗಿಸುತ್ತದೆ ಮತ್ತು ಅದರ ಆಕಾರವನ್ನು ಕಾಯ್ದುಕೊಳ್ಳುತ್ತದೆ. ನಾವು ಇದನ್ನು ಕಾಲರ್ ಗೆ ಬಳಸುತ್ತೇವೆ. ಶೈನಿಂಗ್ ಇರುವ ಭಾಗ ಬಟ್ಟೆಯ ತಪ್ಪಾದ ಭಾಗ ಇದು ಬಟ್ಟೆಗೆ ಅಂಟುಕೊಳ್ಳುತ್ತದೆ. ಕಾಲರ್ ಪೀಸನ್ನು ಕಟ್ ಮಾಡಿ ತೆಗೆಯಿರಿ. ಜೋಪಾನವಾಗಿರಿ ಕರ್ವ್ಡ್ ಪೀಸಸ್ ಹತ್ತಿರ ತಪ್ಪಾಗುವ ಸಾಧ್ಯತೆಯಿದೆ.


ಈಗ ವೀಡಿಯೋದಲ್ಲಿ ತೋರಿಸಿರುವಂತೆ ಮಿಕ್ಕಿರುವ ಸ್ಯಾಟಿನ್ ಲೈನಿಂಗ್ ಬಟ್ಟೆಯನ್ನು ತೆಗೆದುಕೊಂಡು ಅರ್ಧಕ್ಕೆ ಮಡಚಿ ಹೆಚ್ಚಾಗಿರುವ ಬಟ್ಟೆಯನ್ನು ಕತ್ತರಿಸಿ. ನಾವೀಗ ಈ ಬಟ್ಟೆಯಿಂದ ಬಯಾಸ್‌ಸ್ಟ್ರಿಪ್ಪನ್ನು ಕತ್ತರಿಸೋಣ. ಬಟ್ಟೆಯ ಕೊನೆಯಿಂದ 1.5 ಇಂಚು ಅಳತೆ ಮಾಡಿ ಮಾರ್ಕ್ ಮಾಡಿ. ಇದನ್ನು ಪೂರ್ತಿ ಬಟ್ಟೆಗೆ ಮಾಡಬೇಕು. ಇದಾದ ಮೇಲೆ ರೂಲರ್ ತೆಗೆದುಕೊಂಡು ಮಾರ್ಕ್ ಮಾಡಿರುವ ಪಾಯಿಂಟ್ ಸಹಾಯದಿಂದ ನೇರವಾದ ಗೆರೆಯನ್ನು ಹಾಕಬೇಕು. ಸ್ಟ್ರಿಪ್ಸನ್ನು ಕಟ್ ಮಾಡಿ. ಇದೇ ವಿಧಾನವನ್ನು ಇನ್ನೂ ಎರಡು ಸ್ಟ್ರಿಪ್ಸ್ ಗೂ ಮಾಡಬೇಕು. ನಿಮ್ಮ ಹತ್ತಿರ ಒಟ್ಟು 3 ಬಯಾಸ್‌ಸ್ಟ್ರಿಪ್ಸ್ ಇರಬೇಕು.







ಈ ಎಲ್ಲಾ ಪೀಸ್ ಗಳೇ ಮ್ಯಾಂಡರೀನ್ ಕಾಲರ್ ಬ್ಲೌಸ್ ಹೊಲೆಯಲು ಬೇಕಾಗಿರುವುದು.ಈಗ ಮರುಸಂಗ್ರಹ ಮಾಡಲು ಇದು ನಮ್ಮ ಮುಂಭಾಗದ ಪೀಸ್, ಇದು ಕಾಲರ್ ಮತ್ತು ಇದು ಫ್ಯೂಸಿಂಗ್, ಇದು ಹಿಂಭಾಗದ ಪೀಸ್ ಗಳು ಮತ್ತು ಇದು ಬಯಾಸ್‌ಸ್ಟ್ರಿಪ್.

## ಹಂತ 2 : ಲೈನಿಂಗ್ ಬಟ್ಟೆಯನ್ನು ಸೀಕ್ವಿನ್ಸ್ ಬಟ್ಟೆಗೆ ಸೇರಿಸುವುದು ಮತ್ತು ಡಾರ್ಟನ್ನು ಸೃಷ್ಟಿಸುವುದು



ಮುಂಭಾಗದ ಪೀಸನ್ನು ಅದರ ಲೈನಿಂಗ್ಗೊಂದಿಗೆ ತೆಗೆದುಕೊಳ್ಳಿ, ಅನ್ ಪಿನ್ ಮಾಡಿ ಬಟ್ಟೆಯನ್ನು ತೆರೆಯಿರಿ. ಸೀಕ್ವಿನ್ಸ್ ಬಟ್ಟೆಯ ತಪ್ಪಾದ ಭಾಗವನ್ನು ಲೈನಿಂಗ್ ಬಟ್ಟೆಯ ಸರಿಯಾದ ಭಾಗಕ್ಕೆ ಇಲ್ಲಿ ತೋರಿಸಿರುವಂತೆ ಇಡಬೇಕು. ನಾವೀಗ ಬಟ್ಟೆಯ ಮುಖ್ಯವಾದ ಸೀಕ್ವಿನ್ಸ್ ಬಟ್ಟೆಯನ್ನು ಲೈನಿಂಗ್ ಬಟ್ಟೆಗೆ ಇಟ್ಟು ಪೂರ್ತಿಯಾಗಿ ಹೊಲೆಯಬೇಕು.











ಪೀಸಸನ್ನು ಊಷಾ ವಂಡರ್ ಸ್ಟಿಚ್ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ. ಬಟ್ಟೆಯನು ಪ್ರೆಸರ್ ಫುಟಿನ ಕೆಳಗೆ ಹೊಂದಿಸಿ. ಸೆಲೆಕ್ಟರ್ ಡಯಲನ್ನು A ಮತ್ತು ಹೊಲಿಗೆಯ ಉದ್ದವನ್ನು 2.5ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಯಾವುದಾದರು ತುದಿಯನ್ನು ತಲುಪಿದಾಗ ಪಿವಟಿಂಗ್ ಟೆಕ್ನಿಕ್ ಬಳಸಿ ಇದರಲ್ಲಿ ನೀವು ಬಟ್ಟೆಯನ್ನು ಸೂಜಿ ತೆಗೆಯದೆ ಬಟ್ಟೆಯಲ್ಲಿ ಇರುವಂತೆಯೇ ತಿರುಗಿಸಬಹುದು. ಮುಂಭಾಗದ ಪೂರ್ತಿ ತೋಳಿನ ಭಾಗದಿಂದ ಹಿಡಿದು ನೆಕ್ ಲೈನ್ ಮತ್ತು ಸೈಡ್ಸನ್ನು ಹೊಲೆಯಬೇಕು. ದಾರವನ್ನು ಕತ್ತರಿಸಿ. ನಿಮ್ಮ ಮುಂಭಾಗದ ಬಟ್ಟೆ ನೋಡಲು ಹೀಗೆ ಕಾಣಬೇಕು ಆದರೆ ಇದು ಇನ್ನೂ ಪೂರ್ಣವಾಗಿಲ್ಲಾ. ಟೆಂಪ್ಲೇಟನ್ನು ಮತ್ತೆ ತೆಗೆದುಕೊಂಡು ಬಟ್ಟೆಯ ಅರ್ಧ ಭಾಗಕ್ಕೆ ಇಡಬೇಕು. ಎರಡು ನಾಚಸನ್ನು ಕೆಳಗಿನ ಭಾಗದಲ್ಲಿ ಮತ್ತು ಮಧ್ಯದಲ್ಲಿ ಒಂದು ಡಾಟನ್ನು ಕಾಣಬಹುದು. ಇದು ಡಾರ್ಟಿಗೆ ಮಾರ್ಕಿಂಗ್ ಗಳು. ಇಲ್ಲಿ ತೋರಿಸಿರುವಂತೆ ಡಾರ್ಟನ್ನು ಚಾಲ್ಕ್ ಸಹಾಯದಿಂದ ಮಾರ್ಕ್ ಮಾಡಿ. ಇದನ್ನು ಮುಗಿಸಿದ ಮೇಲೆ ಟೆಂಪ್ಲೇಟನ್ನು ತಿರುಗಿಸಿ ಮೂರು ಪಾಯಿಂಟನ್ನು ಇನ್ನೊಂದು ಅರ್ಧಕ್ಕೂ ಮಾರ್ಕ್ ಮಾಡಿ. ಟೆಂಪ್ಲೇಟನ್ನು ತೆಗೆದು ರೂಲರ್ ನಿಂದ ಎರಡೂ ನಚಸನ್ನು ಸೇರಿಸಿ ಮತ್ತು ಒಂದು ಡಾರ್ಟ್ ತ್ರಿಕೋನಾಕಾರದ ಡಾರ್ಟನ್ನು ಇಲ್ಲಿ ತೋರಿಸಿದಂತೆ ಇರಬೇಕು. ಇದನ್ನು ಎರಡೂ ಕಡೆ ಮಾಡಬೇಕು. ಗೆರೆಗಳು ನೇರವಾಗಿದೆಯೇ ಎಂದು ಸ್






ವೀಡಿಯೋದಲ್ಲಿ ತೋರಿಸಿರುವಂತೆ  ಡಾರ್ಟನ್ನು ಹೊಲೆಯಬೇಕು. ಎರಡೂ ತುದಿಯನ್ನು ಮ್ಯಾಚ್ ಮಾಡಿ ಲೈನಿನ ಮೇಲೆ ಹೊಲೆಯಿರಿ. ಹೊಲಿಗೆಯನ್ನು ಭದ್ರಗೊಳಿಸಲು ರಿವರ್ಸ್ ಹೊಲಿಗೆಯನ್ನು ಹಾಕಲು ಮರೆಯಬೇಡಿ. ದಾರವನ್ನು ಕತ್ತರಿಸಿ ಇನ್ನೊಂದು ಕಡೆನೂ ಹೀಗೆ ಮಾಡಿ. ಲೈನ್ಸನ್ನು ಮ್ಯಾಚ್ ಮಾಡಿ ಅದರ ಮೇಲೆ ಹೊಲೆಯಿರಿ. ಇದಾದ ನಂತರ ಎಲ್ಲಾ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ. ನಿಮ್ಮ ಮುಂಭಾಗದ ಪೀಸ್ ನೋಡಲು ಮುಂಭಾಗದಿಂದ ಮತ್ತು ಹಿಂಭಾಗದಿಂದ ಕಾಣಬೇಕು.



ಈಗ ಹಿಂಬದಿಯ ಪೀಸನ್ನು ತೆಗೆದುಕೊಂಡು ಅನ್ ಪಿನ್ ಮಾಡಬೇಕು. ಮುಂಭಾಗದ ಪೀಸಿನಂತಿರದೆ, ಹಿಂಭಾಗದ ಪೀಸಿನಲ್ಲಿ ಎರಡು ಬೇರೆ ಬೇರೆ ವಿಭಾಗವಿದೆ ಲೈನಿಂಗನ್ನು ಹೊರತುಪಡಿಸಿ, ನೀವು ಏಕೆ ಎಂದು ಯೋಚಿಸುತ್ತಿರುವಿರಾದರೆ, ಇದು ಬ್ಲೌಸಿನ ಓಪೆನಿಂಗ್ ಮತ್ತು ಕ್ಲೋಶರ್ ಭಾಗದಲ್ಲಿ ಜಿಪ್ಪರ್ಸ್ ಇರುತ್ತದೆ. ಮುಂಭಾದ ಪೀಸಿನ ತರಹ, ಸೀಕ್ವಿನ್ ಬಟ್ಟೆಯ ತಪ್ಪಾದ ಭಾಗವನ್ನು ಲೈನಿಂಗ್ ಬಟ್ಟೆಯ ಸರಿಯಾದ ಭಾಗದ ಮೇಲೆ ಇಡಬೇಕು. ನಾವು ಲೈನಿಂಗ್ ಬಟ್ಟೆಯನ್ನು ಮುಖ್ಯವಾದ ಬಟ್ಟೆಗೆ ಪೂರ್ತಿಯಾಗಿ ಹೊಲೆಯುತ್ತಾ ಸೇರಿಸುತ್ತೇವೆ .




ಈಗ ಮತ್ತೆ ಬಟ್ಟೆಗಳನ್ನು ಊಷಾ ವಂಡರ್ ಸ್ಟಿಚ್ ಪ್ಲಸ್ ಹೊಲಿಗೆ ಯಂತ್ರದ ಹತ್ತಿರ ತೆಗೆದುಕೊಂಡು ಹೋಗಿ ಒಂದು ಪೀಸನ್ನು ಹೊಲೆಯುವುದರೊಂದಿಗೆ ಪ್ರಾರಂಭಿಸಿ.

















ವೀಡಿಯೊಂದಲ್ಲಿ ತೋರಿಸಿರುವಂತೆ ಎಲ್ಲಾಕ್ ಕಡೆನೂ ಹೊಲೆಯಿರಿ, ಪಿವಟ್ ಟೆಕ್ನಿಕನ್ನು ತುದಿಯನ್ನು ತಲುಪಿದಾಗ ಬಳಸಿ ಇದರಿಂದ ಒಂದೇ ನಿರಂತರವಾದ ಹೊಲಿಗೆ ಇರುತ್ತದೆ. ದಾರವನ್ನು ಕತ್ತರಿಸಿ ಈಗ ಇನ್ನೊಂದು ಪೀಸಿಗೆ ಹೋಗೋಣ. ನಿಮ್ಮ ಹೊಲೆದಿರುವ ಎರಡು ಪೀಸ್ ನೋಡಲು ಹೀಗೆ ಕಾಣಬೇಕು.  ನಾವು ಈಗ ಹಿಂಭಾಗದ ಡಾರ್ಟ್ ಮೇಳೇ ಕೆಲಸ ಮಾಡೋಣ. ಹಿಂಭಾಗದ ಟೆಂಪ್ಲೇಟನ್ನು ಬಟ್ಟೆಯ ಮೇಲಿಟ್ಟು ಮೂರು ಪಾಯಿಂಟನ್ನು ತೋರಿಸಿರುವಂತೆ ಮಾರ್ಕ್ ಮಾಡಬೇಕು. ಟೆಂಪ್ಲೇಟನ್ನು ತಿರುಗಿಸಿ ಮಾರ್ಕಿಂಗನ್ನು ಇನ್ನೊಂದು ಪೀಸಿಗೂ ಮಾಡಬೇಕು. ಇದನ್ನು ಮುಗಿಸಿದ ಮೇಲೆ ರೂಲರನ್ನು ಬಳಸಿ ಮಾರ್ಕ್ ಮಾಡಿರುವ ಡಾರ್ಟ್ ಪಾಯಿಂಟನ್ನು ಸೇರಿಸಬೇಕು. ನೀವು ನೇರವಾದ ಗೆರೆಯನ್ನು ಹಾಕಿದೀರ ಎಂದು ಗಮನಿಸಿ.  ಈ ಡರ್ಟಳನ್ನು ಹೊಲೆಯಲು ಬಾಟಮ್ ಡಾರ್ಟ್ ಪಯಿಂಟನ್ನು ಅಲೈನ್ ಮಾಡಿ ಮತ್ತು ತೋರಿಸಿರುವಂತೆ ಬಟ್ಟೆಯನ್ನು ಮಡಚಿ ಮತ್ತು ಈಗ ಮಾರ್ಕ್ ಮಾಡಿರುವ ಗೆರೆಯ ಮೇಲೆ ಹೊಲೆಯಿರಿ, ರಿವರ್ಸ್ ಹೊಲಿಗೆ ಈ ಹಂತಕ್ಕೆ ತುಂಬಾ ಮುಖ್ಯ. ಇದೇ ವಿಧಾನವನ್ನು ಇನ್ನೊಂದು ಪೀಸಿಗೂ ಪುನರಾವರ್ತಿಸಬೇಕು. ಎಲ್ಲಾ ಹೆಚ್ಚುವರಿಯಾದ ದಾರವನ್ನು ಕತ್ತರಿಸಿ. ನಮ್ಮ ಹೊಲೆದಿರುವ ಡಾರ್ಟ್ಗಳು ನೋಡಲು ಹೀಗೆ ಕಾಣಬೇಕು.

## ಹಂತ 3 : ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಭುಜ ಮತ್ತು ಸೀಮನ್ನು ಹೊಲೆಯುತ್ತಾ ಸೇರಿಸುವುದು

ಮುಂದೆ ನಮ್ಮ ಪಟ್ಟಿಯಲ್ಲಿರುವುದು ಮುಂಭಾಗ ಮತ್ತು ಹಿಂಭಾಗದ ಪೀಸನ್ನು ಭುಜವನ್ನು ಜೋಡಿಸುವುದರೊಂದಿಗೆ ಸೇರಿಸುವುದು. ಎರಡು ಹಿಂಭಾಗದ ಪೀಸನ್ನು ಮುಂಭಾಗದ ಪೀಸಿನ ಮೇಲೆ ಇಡಬೇಕು.ಬಲಭಾಗ ಬಲಭಾಗವನ್ನು ನೋಡುವಂತಿರಬೇಕು. ಎರಡೂ ಭುಜದ ಭಾಗವನ್ನು ಪಿನ್ ಮಾಡಿ. ಪ್ರೆಸ್ಸರ್ ಫುಟಿಗೆ ಭುಜ ಭಾಗದ ತುದಿಯನ್ನು ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ.ಹೊಲೆಯುತ್ತಿರುವಾಗ ಪಿನ್ ಗಳನ್ನು ತೆಗೆಯಿರಿ. ಇನ್ನೊಂದು ಭುಜದ ಭಾಗಕ್ಕೂ ಹೀಗೆ ಮಾಡಬೇಕು. ಇದು ನಮ್ಮ ನೇರ ಹೊಲಿಗೆಗಳು. ಆದರೆ ಫ್ರೇಡ್ ಎಡ್ಜಸನ್ನು ನಿಯಂತ್ರಿಸಿ., ನಾವೀಗ ಜಿಗ್ ಜಾಗ್ ಹೊಲಿಗೆಯನ್ನು ಎಲ್ಲದರ ಮೇಲೂ ಹಾಕಬೇಕು. ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು C ಮತ್ತು ಹೊಲಿಗಯ ಉದ್ದವನ್ನು 1.5 ಗೆ ಇಟ್ಟು ಭುಜದ ತುದಿಯನ್ನು ಹೊಲೆಯಿರಿ. ಗಮನದಲ್ಲಿರಲಿ ಜಿಗ್ ಜಾಗ್ ಹೊಲಿಗೆಗೆ ರಿವರ್ಸ್ ಹೊಲಿಗೆಯ ಅಗತ್ಯವಿರುವುದಿಲ್ಲಾ. ನೀವು ಮುಗಿಸಿದ ಮೇಲೆ ಹೆಚ್ಚಾದ್ದ ದಾರವನ್ನು ಕತ್ತರಿಸಿ. ಬಟ್ಟೆ ಇನ್ನು ನೀಟಾಗಿ ಕಾಣುತ್ತಿದೆಯಲ್ಲವೇ? ಇದೇ ರೀತಿ ಪಿಸ್ ಗಳು ಹೊಲೆದ ನಂತರ ಕಾಣುತ್ತದೆ.

ಭುಜದ ನಂತರ ನಾವು ಸೈಡ್ಗಳನ್ನು ಹೊಲೆಯುತ್ತೇವೆ. ವೀಡಿಯೊಂದಲ್ಲಿ ತೋರಿಸಿರುವಂತೆ ಸೀಮ್ ಅಲೋಯನ್ನಸ್ನು ಪಿನ್ ಮಾಡಿ ಹೊಲೆಯೋಣ. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಪ್ಯಾಟರ್ನ್ ಸೆಲೆಕ್ಟರ್ ಡಯಲನ್ನು A ನೇರ ಹೊಲಿಗೆಗಾಗಿ ಮತು ಹೊಲಿಗೆಯ ಉದ್ದ 2.5ಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ರಿವರ್ಸ್ ಹೊಲಿಗೆಯನ್ನು ಹಾಕಿ ಇದು ಹೊಲಿಗೆಯನ್ನು ಭದ್ರಗೊಳಿಸುತ್ತದೆ. ಹೊಲೆಯುತ್ತಿರುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಒಮ್ಮೆ ತುದಿಯನ್ನು ತಲುಪಿದಾಗ ಪ್ರೆಸ್ಸರ್ ಫುಟನ್ನು ತೆಗೆದು ದಾರವನ್ನು ಕತ್ತರಿಸಿ ಇನ್ನೊಂದು ಬದಿಗೆ ಹೋಗಬೇಕು. ಹೊಲೆಯುವ ಇದೇ ವಿಧಾನವನ್ನು ಅನುಸರಿಸಿ. ನಿಮ್ಮ ಹೊಲಿಗೆ ಹೀಗೆ ಕಾಣಬೇಕು.


















## ಹಂತ 4 : ಬಯಾಸ್ ಸ್ಟ್ರಿಪನ್ನು ಆರ್ಮ್ ಹೋಲಿಗೆ ಸೇರಿಸುವುದು ಮತ್ತು ಬಾಟಮನ್ನು ಹೆಮ್ ಮಾಡುವುದು

ಬ್ಲೌಸಿನ ಮೂಲ ರಚನೆ ತಯಾರಾಗಿದೆ, ಮುಂದೆ ನಮ್ಮ ಪಟ್ಟಿಯಲ್ಲಿ ಬಯಾಸ್ ಸ್ಟ್ರಿಪನ್ನು ಸೇರಿಸುವುದು. ಒಂದು ಸ್ಟ್ರಿಪ್ ಬಾಟಮಿಗೆ ಮತ್ತು ಇನ್ನೆರಡು ಆರ್ಮ್ ಹೋಲಿಗೆ ಉಪಯೋಗಿಸುತ್ತೇವೆ. ಸುಮಾರು ¾ ಇಂಚು ಬಯಾಸ್ ಸ್ಟ್ರಿಪಿನ ಪ್ರಾರಂಭದಲ್ಲಿ ಬಿಡಬೇಕು ಮತ್ತು ಸ್ಟ್ರಿಪಿನ ಬಲಭಾಗವನ್ನು ಬಲಭಾಗದ ಬಟ್ಟೆಯ ಮೇಲೆ ಅರ್ಮ್ ಹೋಲಿನ ಸುತ್ತಲೂ ವೀಡಿಯೋದಲ್ಲಿ ತೋರಿಸಿರುವಂತೆ ಇಡಬೇಕು. ಪ್ರೆಸ್ಸರ್ ಫುಟನ್ನು ಬಟ್ಟೆಯ ಕೊನೆಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ನೀವು ಪ್ರಾರಂಭಮಾಡಿದ್ದೀರೋ ಅಲ್ಲಿಗೆ ತಲುಪಿದಾಗ ನಿಲ್ಲಿಸಿ. ದಾರವನ್ನು ಕತ್ತರಿಸುವ ಮುನ್ನ ಸ್ಟ್ರಿಪನ್ನು ಜಾಯಿಂಟಿನ ವರೆಗೂ ಅಲೈನ್ ಮಾಡಿ ಬಯಾಸ್ ಸ್ಟ್ರಿಪನ್ನು ಉದ್ದವಾಗಿ ತೋರಿಸಿರುವಂತೆ ಹೊಲೆಯಿರಿ. ಹೆಚ್ಚಾಗಿರುವ ಸ್ಟ್ರಿಪನ್ನು ½ ಇಂಚು ಹೆಚ್ಚಾಗಿ ಬಿಟ್ಟು ಕತ್ತರಿಸಿ. ಈಗ ಮಿಕ್ಕಿರುವ ಎರಡು ಇಂಚನ್ನು ಹೊಲೆಯಿರಿ ಮತ್ತು ಅದನ್ನು ಬಯಾಸ್ ಸ್ಟ್ರಿಪಿನ ಸೀಮನ್ನು ಚಪಟ್ಟೆ ಮಾಡಿ ಅದರ ಮೇಲೆ ಹೊಲೆಯಿರಿ. ಇದಾದ ಮೇಲೆ ಇನ್ನೊಂದು ಅರ್ಮ್ ಹೋಲಿಗೆ ಮುಂದುವರಿದು ಇದೇ ವಿಧಾನವನ್ನು ಅನುಸರಿಸಿ.

ನಮ್ಮ ಆರ್ಮ್ ಹೋಲ್ಸ್ ಈಗ ಮುಗಿದಿದೆ.

ಈಗ ಬ್ಲೌಸಿನ ಬಾಟಮಿಗೆ ಹೋಗೋಣ. ಬಯಾಸ್ ಸ್ಟ್ರಿಪನ್ನು ಅರ್ಧಕ್ಕೆ ಮಡಚಿ, ಹಿಂಭಾಗ ಹಿಂಭಾಗವನ್ನು ನೋಡುವಂತೆ ಇದನ್ನು ಬ್ಲೌಸಿನ ಬಾಟಮ್ ಭಾಗದ ಎದುರು ಇಡಬೇಕು. ಬಯಾಸ್ ಸ್ಟ್ರಿಪಿನ ಮಡಚಿರುವ ಭಾಗ ಮೇಲಿರಬೇಕು ಮತ್ತು ಓಪೆನ್ ತುದಿಯು ಕೆಳಗಿರಬೇಕು. ಬ್ಲೌಸಿನ ಬಾಟಮ್ ತುದಿಯನ್ನು ಒಳಭಾಗಕ್ಕೆ ½ ಇಂಚಿನಷ್ಟು ಇಲ್ಲಿ ತೋರಿಸಿರುವಂತೆ ಮಡಚಿ. ಪ್ರಾರಂಭದಲ್ಲಿ ¾ ಇಂಚಿನಷ್ಟು ಸ್ಟ್ರಿಪನ್ನು ಬಿಡಬೇಕು. ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಹೊಲೆಯಲು ಪ್ರಾರಂಭಿಸಿ. ನಿಮ್ಮ ಕೈಯನ್ನು ಭದ್ರವಾಗಿಟ್ಟುಕೊಂಡು ಬಯಾಸ್ ಸ್ಟ್ರಿಪನ್ನು ಪೂರ್ತಿಯಾಗಿ ಸರಿಯಾಗಿ ಮಡಚಿ. ಎಲ್ಲಾ ಭಾಗದಲ್ಲೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ಬ್ಲೌಸಿನ  ಮುಂಭಾಗದಿಂದ ಹಿಂಭಾಗದವರೆಗೂ ಮತ್ತು ಓಪೆನಿಂಗಿಂದ ಇನ್ನೊಂದು ಬದಿಗೆ.ಇನ್ನೊಂದು ಬದಿಯ ಓಪೆನಿಂಗ್ ತಲುಪಿದಾಗ ಮತ್ತೆ 2 ಇಂಚು ಸ್ಟ್ರಿಪನ್ನು ಬಿಟ್ಟು ಕೊನೆಯಲ್ಲಿ ಹೆಚ್ಚಾಗಿರುವ ಎಲ್ಲಾ ಬಯಾಸ್ ಸ್ಟ್ರಿಪನ್ನು ಕತ್ತರಿಸಿ. ಇದನ್ನು ಮುಗಿಸಿದ ಮೇಲೆ ನಾವು ಆರ್ಮ್ ಹೋಲ್ ಮತ್ತು ಬಾಟಮಿನ ಬಯಾಸ್ ಸ್ಟ್ರಿಪಿಗೆ ಮೇಲಿನ ಹೊಲಿಗೆಯನ್ನು ಹಾಕಬೇಕು ಇದು ಸರ್ಕ್ಯುಲರ್ ಸ್ಟ್ರಿಪ್ ಚಪಟ್ಟೆಯಾಗಿರುವುದಕ್ಕೆ ಮತ್ತು ನೀಟಾದ ಫಿನಿಷ್ ಕೊಡುವುದಕ್ಕೆ ಸಹಕಾರಿಯಾಗುತ್ತದೆ. ವೀಡಿಯೋದಲ್ಲಿ ತೋರಿಸಿರುವಂತೆ ಹೊಲೆಯಿರಿ. ಇನ್ನೊಂದು ಆರ್ಮ್ ಹೋಲನ್ನೂ ಹೊಲೆಯಿರಿ.ಎಲ್ಲಾ ಹೆಚ್ಚಿನ ದಾರವನ್ನು ಕತ್ತರಿಸಿ ಮತ್ತು ಬ್ಲೌಸಿನ ಬಾಟಮ್ ಹತ್ತಿರ ಹೋಗೋಣ, ನಿಮ್ಮ ಬಾಟಮ್ ಬಯಾಸ್ ಸ್ಟ್ರಿಪ್ ಚಪಟ್ಟೆಯಾಗಿದೆಯೇ ಖಾತ್ರಿಪಡಿಸಿಕೊಂಡು ಅದನ್ನು ಮೇಲಿನ ಹೊಲಿಗೆ ಹಾಕುತ್ತಿರುವಾಗ ಮಡಚುತ್ತಾ ಹೋಗಬೇಕು. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಇರಬೇಕು. ಬ್ಲೌಸಿನ ಇವು ಆರ್ಮ್ ಹೋಲ್ ಮತ್ತು ಇದು ಬಾಟಮ್ ಹೆಮ್.

## ಹಂತ 5 ಜಿಪ್ಪರನ್ನು ಸೇರಿಸುವುದು

ಮುಂದಿನ ಹಂತ ಜಿಪ್ಪರನ್ನು ಬ್ಲೌಸಿಗೆ ಸೇರಿಸುವುದು. 14 ಇಂಚಿನ ಓಪೆನ್ ಎಂಡೆಡ್ ಮೆಟಾಲಿಕ್ ಜಿಪ್ಪರನ್ನು ತೆಗೆದುಕೊಳ್ಳಿ, ಇದನ್ನು ಸೇರಿಸಲು ಬ್ಲೌಸಿನ ಹಿಂಭಾಗದ ಒಂದು ಬದಿಯನ್ನು ಅರ್ಧ ಇಂಚು  ಮಡಚಿ ಅದನ್ನು ವೀಡಿಯೋದಲ್ಲು ತೋರಿಸಿರುವಂತೆ ಜಿಪ್ಪರಿನ ಬಲಭಾಗದ ಮೇಲೆ ಇಡಬೇಕು.  ಮಡಚಿರುವ ತುದಿಯನ್ನು ಜಿಪ್ಪರಿನ ಬಲಭಾಗದ ಮೇಲೆ ಇಡಬೇಕು.




ಹೊಲೆಯಲು ಸುಲಭವಾಗುವಂತೆ ಇದನ್ನು ಪಿನ್ ಮಾಡಿ.
ಈಗ ಜಿಪ್ಪರನ್ನು ಮುಚ್ಚಿ ನಾವು ಪಿನ್ ಮಾಡಿರುವ ಜಾಗದಿಂದ ಬಟ್ಟೆಗೆ ಸೇರುಸುತ್ತಾ ಹೋಗಿ.






ಬ್ಲೌಸನ್ನುನಿಮ್ಮ ಹೊಲಿಗೆ ಯಂತ್ರಕ್ಕೆ ತೆಗೆದುಕೊಂಡು ಹೋಗಿ. ಜಿಪ್ಪರನ್ನು ಇನ್ನೊಮ್ಮೆ ತೆಗೆಯಿರಿ ಇದು ಹೊಲೆಯಲು ಸುಲಭವಾಗುತ್ತದೆ ಮತ್ತು ರೆಗ್ಯುಲರ್ ಪ್ರೆಸ್ಸರ್ ಫೂಟನ್ನು ತೆಗೆದು ಊಷಾ ಜನೋಮ್ ಜಿಪ್ಪರ್ ಫುಟನ್ನು ಹಾಕಬೇಕು. ಇದನ್ನು ಮುಗಿಸಿದ ಮೇಲೆ ಬಟ್ಟೆಯ ತುದಿಯನ್ನು ಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ ಮತ್ತು ಹೊಲೆಯಲು ಪ್ರಾರಂಭಿಸಿ. ರಿವರ್ಸ್ ಹೊಲಿಗೆಯನ್ನು ತಪ್ಪಿಸಬೇಡಿ, ಹೌದು ಇದು ಜಿಪ್ಪರನ್ನು ಹೊಲೆಯಲೂ ತುಂಬಾ ಮುಖ್ಯ. ದಾರವನ್ನು ಕತ್ತರಿಸಿ ಮತ್ತು ಜಿಪ್ಪರಿನ ಇನ್ನೊಂದು ಕಡೆನೂ ಹೊಲೆಯಿರಿ. ನೀವು ಕೆಳಗಿನ ಭಾಗಕ್ಕೆ ಹೊಲೆಯುತ್ತಾ ಹೋಗುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಸೇರಿಸಿರುವ ಜಿಪ್ಪರ್ ತೆರೆಯಲು ಯವುದೇ ಅಡಚಣೆಯಿಲ್ಲದೆ ಸುಲಭವಾಗಿರಬೇಕು. ನಿಮ್ಮ ಹೊಲಿಗೆ ನೋಡಲು ಹೀಗೆ ಕಾಣಬೇಕು.




## ಹಂತ 6 ಕಾಲರನ್ನು ಹೊಲೆಯುವುದು










ನಾವು ಜಿಪ್ಪರನ್ನು ಸೇರಿಸುವುದನ್ನು ಮುಗಿಸಿದ ನಂತರ, ನಾವು ಕಾಲರನ್ನು ಹೊಲೆಯೋಣ.ಇದೇ ಬ್ಲೌಸಿನ ಮುಖ್ಯ ಹೈಲೈಟ್. ನಿಮ್ಮ ಹತ್ರ ಈಗ ಮೈನ್ ಸೀಕ್ವೀನ್ ಕಾಲರ್ ಪೀಸ್, ಎರಡು ಲೈನಿಂಗ್ ಕಾಲರ್ ಬಟ್ಟೆ ಮತ್ತು ಎರಡು ಇಂಟರ್ ಲೈನಿಂಗ್ ಫ್ಯೂಸಿಂಗ್ ಕಾಲರ್ ಪೀಸ್. ನಾವೀಗ ಲೈನಿಂಗಿರುವ ಅಥವಾ ಫ್ಯೂಸಿಂಗ್ ಬಟ್ಟೆಯ ತಪ್ಪಾದ ಭಾಗವನ್ನು ಲೈನಿಂಗ್ ಬಟ್ಟೆಗೆ ಇಟ್ಟು ಇದು ಅಂಟಿಕೊಳ್ಳಬೇಕು ಮತ್ತು ಭದ್ರವಾಗಿರುವಂತೆ ಐರನ್ ಮಾಡಬೇಕು. ಸುಮ್ಮನೆ ಬಟ್ಟೆಯನ್ನು ಫ್ಯೂಸಿಂಗ್ ಮಾಡಿರುವ ಕಡೆ ಮೇಲೆ ಬರುವಂತೆ  ಐರನ್ ಟೇಬಲ್ ಮೇಲೆ ಇಟ್ಟು ಅದನ್ನು ಅಂಟಿಕೊಳ್ಳಲು ಐರನ್ ಮಾಡಿ. ಇದನ್ನು ಎರಡೂ ಪಿಸ್ ಗಳಿಗೂ ಬೇರೆ ಬೇರೆಯಾಗಿ ಮಾಡಬೆಕು. ಈಗ ಒಂದು ಲೈನಿಂಗ್ ಪೀಸನ್ನು ಸುತ್ತ ತಿರುಗಿಸಿ, ಬಲಭಾಗ ನಿಮ್ಮನು ನೋಡುವಂತಿರಬೇಕು. ಈಗ ಇನ್ನೊಂದು ಲೈನಿಂಗ್ ಬಟ್ಟೆಯ ಬಲಭಾಗವನ್ನು ಮೇನ್ ಬಟ್ಟೆಯ ಮೇಲೆ ತೋರಿಸಿರುವಂತೆ ಇಡಬೇಕು. ಇದಾದ ನಂತರ ಎಲ್ಲಾ ಪೀಸ್ ಗಳನ್ನು ಒಟ್ಟಿಗೆ ಹೊಲೆಯುತ್ತೇವೆ. ಕಾಲರ್ ಪೀಸನ್ನು ಸರಿಯಾದ ಜಾಗದಲ್ಲಿ ಪಿನ್ ಮಾಡಿ,ಬೀಡೆಡ್ ಪಿನ್ ಎಲ್ಲಾ ಬಟ್ಟೇಗೂ ಹೋಗಿದೆಯೇ ಎಂದು ಖಚಿತಪಡಿಸಿಕೊಳ್ಳಿ, ಹೊಲೆಯುವ ಮುನ್ನ ಜಿಪ್ಪರ್ ಫುಟನ್ನು ತೆಗೆದು ರೆಗ್ಯುಲರ್ ಫುಟನ್ನು ಹಾಕಬೇಕು. ಫ್ಯೂಸಿಂಗ್ ಬಟ್ಟೆಯಿಂದ ಹೊಲೆಯಲು ಪ್ರಾರಂಭಿಸಿ ಆದರೆ ಬಟ್ಟೆಯ ಮೇಲ್ಭಾಗದಿಂದ ಹೊಲೆಯುತ್ತಿಲ್ಲಾ ಎಂದು ಖತ್ರಿಯಾಗಿರಿ. ಒಮ್ಮೆ ಇಂಟರ್ಲೈನಿಂಗ್ ಫ್ಯೂಸಿಂಗ್ ಬಟ್ಟೆಯ ತುದಿಯನ್ನು ತಲುಪಿದಾಗ ಬಟ್ಟೆಯನ್ನು ತಿರುಗಿಸಿ. ನಾವು ಕಾಲರ್ ಬಟ್ಟೆಯನ್ನು ಒಟ್ಟಿಗೆ ಒಂದೇ ಹೊಲಿಗೆಯಲ್ಲಿ ಹೊಲೆಯುತ್ತೇವೆ ಆದರೆ ನಾವು ಮೂರು ಕಡೆ ಮಾತ್ರ ಹೊಲೆಯುತ್ತೇವೆ. ಏಕೆಂದು ನೀವು  ನೋಡುವಿರಿ.










ಇದಾದ ನಂತರ ಹೆಚ್ಚಿನ ದಾರವನ್ನು ಕತ್ತರಿಸಿ ಪಿನ್ ಗಳನ್ನು ತೆಗೆಯಿರಿ. ನಾಚಸನ್ನು ಬಟ್ಟೆಯ ಈಗ ತಾನೆ ಹೊಲಿದಿರುವ ಭಾಗದಲ್ಲಿ ಮಾಡಬೇಕು. ಹಾಗೆ ಎಡ್ಜಸನ್ನೂ ವೀಡಿಯೋದಲ್ಲಿ ತೋರಿಸಿರುವಂತೆ ಡಯಾಗ್ನಲ್ಲಾಗಿ ಮೇಲಿನಿಂದ ಕತ್ತರಿಸಿ, ನೆನೆಪಿರಲಿ ಹೊಲಿಗೆಯ ಮೇಲೆ ಕತ್ತರಿಸಬೇಡಿ. ನಚಸನ್ನು ಎಲ್ಲಾ ಕಡೆನೂ ಮಾಡುತ್ತ ಹೋಗಬೇಕು. ಇದು ಸರ್ಕ್ಯುಲರ್ ಹೊಲಿಗೆಯನ್ನು ಚಪ್ಪಟ್ಟೆ ಮಾಡಲು ಸಹಾಯವಾಗುತ್ತದೆ. ಇನ್ನೊಮ್ಮೆ ಮರೆಯಬೇಡಿ ನಾಚಸ್ ಮಾಡುವಾಗ ಹೊಲಿಗೆಯ ಮೇಲೆ ಕತ್ತರಿಸಬೇಡಿ.

ಈಗ ಕಾಲರನ್ನು ತೆಲಕೆಳಗಾಗಿ ಹೊಲೆಯದೇ ಇರುವ ಕಡೆಯಿಂದ ವೀಡಿಯೋದಲ್ಲಿ ತೋರಿಸಿರುವಂತೆ ತುರಿಗಿಸಿ. ಬಲಭಾಗದ ಕಾಲರನ್ನು ಬಲಭಾಗದ ಬಟ್ಟೆಯ ಎದುರಿನಲ್ಲಿ ಇಡಬೇಕು, ಕಾಲರಿನ ತುದಿ ಜಿಪ್ಪರಿನ ತುದಿಗೆ ವೀಡಿಯೋದಲ್ಲಿ ತೋರಿಸಿರುವಂತೆ ಅಲೈನ್ ಆಗಬೇಕು. ಪಿನ್ ಮಾಡಿ ಸರಿಯಾದ ಕಡೆಇಡಿ. ಕಾಲರಿನ ಎಲ್ಲಾ ಭಾಗದಲ್ಲೂ ಪಿನ್ ಮಾಡಲು ಮುಂದುವರಿಸಿ. ಇದನ್ನು ಮುಗಿಸಿದ ಮೇಲೆ ಹೆಚ್ಚಾಗಿರುವ ಜಿಪನ್ನು ಕತ್ತರಿಸಿ.

ಹೊಲೆಯಲು ಸುಲಭವಾಗಲು ಇಪನ್ನು ತೆರೆಯಿರಿ ಮತ್ತು ಕಾಲರಿನ ತುದಿಯನ್ನು ಜಿಪ್ಪರ್ ಫುಟಿಗೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ.ಇನ್ನೊಂದು ಕಡೆಗೆ ಹೋಗುತ್ತಿರುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ನೀವು ನೋಡಬಹುದು, ನಾವು ಕಾಲರನ್ನು ಹೊಲೆದು ಜೋಡಿಸಿದ್ದೇವೆ.








## ಹಂತ 7 : ಕಾಲರ್, ಆರ್ಮ್ ಹೋಲ್ಸ್ ಮತ್ತು ಬಾಟಮನ್ನು ಕೈಯಿಂದ ಹೆಮ್ ಮಾಡುವುದು

ಈಗ ನೀಟದ ಫಿನಿಷಿಗಾಗಿ, ನಾವು ಕೈಯಲ್ಲಿ ಕಾಲರಿನ ತೆರೆದಿರುವ ತುದಿಯನ್ನು ಹೊಲೆಯಬೇಕು. ಕಾಲರನ್ನು ಮುಗಿಸಿದ ಮೇಲೆ, ನಾವು ಆರ್ಮ್ ಹೋಲನ್ನು ಕೂಡ ಹೊಲೆಯಬೇಕು ಬಯಾಸ್ ಸ್ಟ್ರಿಪನ್ನು ಒಳಕ್ಕೆ ಮಡಚಿ ಅದರ ಮೇಲೆ ಹೊಲೆಯಿರಿ. ಹೆಚ್ಚಾಗಿರುವ ಬಯಾಸ್ ಸ್ಟಿಪನ್ನು ಕೆಳಭಾಗದಲ್ಲಿ ಒಳಕ್ಕು ಮಡಚಿ ಅದರ ಮೇಲೆ ಹೊಲೆಯಿರಿ. ಹೊಲೆಯುವುದನ್ನು ತುದಿ ತಲಪುವವರೆಗೂ ಹೊಲೆಯಿರಿ.

ಈ ಹಂತ ಮುಗಿದ ಮೇಲೆ, ಎರಡು ಹುಕನ್ನು ತೆಗೆದುಕೊಂಡು ಅದನ್ನು ಬೌಸಿನ ಕಾಲರಿಗೆ ಸೇರಿಸಿ ಪರಿಪೂರ್ಣವಾದ ಫಿಟ್ ಕೊಡಲು. ಹುಕಿನ ಕಣ್ಣನ್ನು ಹೊಲೆಯಲು ಮರೆಯಬೇಡಿ.

ನಿಮ್ಮ ಬೌಸ್ ಈಗ ಪೂರ್ತಿಯಾಗಿದೆ. ನಾವು ಇದನ್ನು ತೆಳುವಾದ ಸೀರೆಯೊಂದಿಗೆಹೊಂದಿಸಿಕೊಳ್ಳಬಹುದು ಏಕೆಂದರೆ ಈ ಬೌಸೇ ನಿಮ್ಮ ಅಂದಕ್ಕೆ ಅದ್ಭುತವಾಗಿದೆ. ಇದು ಪರಿಪೂರ್ಣವಾದ ಸ್ಟೈಲ್ ಸ್ಟೇಟ್ಮೆಂಟ್ ನಿಮ್ಮ ಆತ್ಮೀಯ ಸ್ನೇಹಿತರ ಮೊದುವೆಗೆ ಅಥವಾ ಕುಟುಂಬದ ಸಮಾರಂಭಕ್ಕೆ ಹೇಳಿ ಮಾಡಿಸಿರುವಂತದ್ದು. ನಿಮಗೆ ಇನ್ನೂ ಎಂತಹ ಬೌಸನ್ನು ನೀವು ನೋಡಲು ಬಯಸುತ್ತೀರೆಂದು ನಮಗೆ ತಿಳಿಸಿ. ಲೈಕ್ ಮಾಡಿ, ಕಮೆಂಟ್ ಮಾಡಿ ಮತ್ತು ಸಬ್‌ಸ್ಕ್ರೈಬ್ ಮಾಡಲು ಮರೆಯಬೇಡಿ.

